(ಆ) ರಾಜ್ಯದ ಮಹಾನಗರ ಪಾಲಿಕೆಗಳ ನೌಕರರಿಗೆ ಏಕರೂಪವಾದ ವೃಂದ ಮತ್ತು ನೇಮಕಾತಿ ನಿಯಮಾವಳಿಯನ್ನು (ಸಿ ಆಂಡ್ ಆರ್ ರೂಲ್ಸ್) ರೂಪಿಸಲಾಗುತ್ತಿದೆ. ನಂತರ ಏಕರೂಪ ಪಟ್ಟಿ (Common cadre list) ಯನ್ನು ತಯಾರಿಸಲಾಗುವುದು.

(ಇ) ರಾಜ್ಯದ ಮಹಾನಗರ ಪಾಲಿಕೆಗಳ ನೌಕರರಿಗೆ ಏಕರೂಪವೃಂದ ಮತ್ತು ನೇಮಕಾತಿ ನಿಯಮಾವಳಿಗನ್ನು ರೂಪಿಸಿ ಸರ್ಕಾರವು ಅಧಿಸೂಚನೆ ಹೊರಡಿಸಿದ ನಂತರ ಸಾಮಾನ್ಯ ವೃಂದ ಪಟ್ಟಿಯನ್ನು ತಯಾರಿಸಬಹುದಾಗಿದೆ.

ಶ್ರೀ ಗೋಪಿನಾಥ್ ಆರ್. ಸಾಂಡ್ರ.—ಮಾನ್ಯ ಅಧ್ಯಕ್ಷರೆ, ನನ್ನ ಎರಡನೇ ಪ್ರಶ್ನೆಗೆ ಏಕರೂಪ ಪಟ್ಟಿಯನ್ನು ತಯಾರಿಸಲಾಗುವುದೆಂದು ಮಾನ್ಯ ಮಂತ್ರಿಗಳೇ ಹೇಳಿದ್ದಾರೆ ಇದರಲ್ಲಿ ಫೈನಾನ್ಷಿಯಲ್ ಇನ್‌ವಾಲ್ವ್‌ಮೆಂಟ್ ಏನೂ ಇಲ್ಲ. ಏಕರೂಪ ಪಟ್ಟಿ ತಯಾರಾಗಿದ್ದರೂ ಕೂಡ ಬೆಂಗಳೂರಿನಲ್ಲಿ ಮಾತ್ರ ಇದನ್ನು ಕೊಟ್ಟಿಲ್ಲವೆಂದು ಹೇಳಿದ್ದಾರೆ. ಅದನ್ನು ಕೂಡಲೇ ತರಿಸಿ ಮಾಡುವುದರ ಬಗ್ಗೆ ಕ್ರಾಟಗಾರಿಕಲಿ ಹೇಳಲಿಕ್ಕೆ ಸಾಧ್ಯವಿದೆಯೇ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಇದರ ಬಗ್ಗೆ ಅಧಿಕಾರಿಗಳೊಡನೆ ಸಮಾಲೋಚನೆ ಮಾಡುವಾಗ ಇದು ಸಾಕಷ್ಟು ತಡವಾಗಿದೆಯೆಂದು ನನಗೆ ಅರ್ಥವಾಗಿದೆ. ಇನ್ನು ಮುಂದೆ ತಡವಾಗದ ರೀತಿಯಲ್ಲಿ ಎಚ್ಚರಿಕೆಯಿಂದ ಈ ಕಾರ್ಯವನ್ನು ಮಾಡಿಸುತ್ತೇನೆಂದು ನಿಮಗೆ ಭರವಸೆ ಕೊಡುತ್ತೇನೆ.

ಶ್ರೀ ಗೋಪಿನಾಥ ಆರ್. ಸಾಂಡ್ರ.—ಎಷ್ಟು ದಿವಸಗಳಲ್ಲಿ ಎಷ್ಟು ತಿಂಗಳಲ್ಲಿ ಮಾಡಲಾಗುತ್ತದೆ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಮಾನ್ಯ ಸದಸ್ಯರಿಗೆ ತೃಪ್ತಿಯಾಗುವ ರೀತಿಯಲ್ಲಿ ಆದಷ್ಟು ಬೇಗ ಇದನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳ ಪಟ್ಟಿಯನ್ನು ಮಂಡಿಸುವುದು.

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಅಧ್ಯಕ್ಷರೇ...

ಶ್ರೀ ಎಂ. ವಿ. ವೆಂಕಟಪ್ಪ.—ಮಾನ್ಯ ಅಧ್ಯಕ್ಷರೆ. ನನ್ನದೊಂದು ಅಲ್ಪಕಾಲಾವಧಿಯ ಪ್ರಶ್ನೆ ಇದೆ.

ಅಧ್ಯಕ್ಷರು.—ಅದು ಅಜೆಂಡಾದಲ್ಲಿ ಇಲ್ಲ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಟಿ. ಎನ್. ನರಸಿಂಹಮೂರ್ತಿ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—ದಿನಾಂಕ ೨೫-೬-೯೦ನೇ ದಿನಾಂಕದ ಲಿಖಿತ ಮೂಲಕ ಉತ್ತರಿಸಲಾಗುವ ಪ್ರಶ್ನೆಗಳ ೧ ನೇ ಪಟ್ಟಿಯಲ್ಲಿನ ೪೦ ಪ್ರಶ್ನೆಗಳ ಪೈಕಿ ೭೬೨, ೫೭೦, ೧೦೬೬, ೯೩೭, ೮೧೬ಎ ಹಾಗೂ ೫೯೭ಸಿ ಈ ಪ್ರಶ್ನೆಗಳ ಹೊರತಾದ ಕೆಳಗೆ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಧಾರವಾಡ ಜಿಲ್ಲೆಯಲ್ಲಿ ಪ್ರೌಢಶಾಲೆ ಮಂಜೂರಾತಿಗೆ ಪರವಾನಿಗಿ.

೯೧೩. ಶ್ರೀ ಪಿ.ಸಿ. ಸಿದ್ದನ ಗೌಡರ್ (ಕಲಘಟಗಿ).—ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.—

(ಅ) ಧಾರವಾಡ ಜಿಲ್ಲಾ ಪರಿಷತ್‌ನವರು ಪ್ರೌಢಶಾಲೆ ಮಂಜೂರಾತಿಗಾಗಿ ಸರ್ಕಾರದ ಪರವಾನಿಗೆ ಕೇಳಿದ್ದಾರೆಯೇ ?

(ಆ) ಖಾಸಗಿ ಪ್ರೌಢ ಶಾಲೆಯನ್ನು ಧಾರವಾಡ ಜಿಲ್ಲೆಗೆ ಮಂಜೂರು ಮಾಡುವ ಆಲೋಚನೆ ಇದೆಯೇ?

ಶ್ರೀ ಕೆ.ಹೆಚ್. ರಂಗನಾಥ್ (ಶಿಕ್ಷಣ ಸಚಿವರು).—

(ಆ) ಹೌದು

(ಆ) ಧಾರವಾಡ ಜಿಲ್ಲೆಯಿಂದ ೧೯೮೯-೯೦ನೇ ಸಾಲಿಗೆ ೨೯ ಖಾಸಗಿ ಪ್ರೌಢ ಶಾಲೆಗಳನ್ನು ತೆರೆಯಲು ಪ್ರಸ್ತಾವನೆಗಳು ಬಂದಿದ್ದು ಸದರಿ ಪ್ರಸ್ತಾವನೆಗಳನ್ನು ಆ ಜಿಲ್ಲೆಯ ಪ್ಲಾನ್ ಮತ್ತು ಬಡ್ಜೆಟ್‌ನಲ್ಲಿ ಆರ್ಥಿಕ ಮೆಟ್ಟಿಮನ್ನು ಅಳವಡಿಸಿಕೊಂಡು ನಂತರ ಕಳುಹಿಸಬೇಕೆಂದು ಹಿಂತಿರುಗಿಸಲಾಗಿದೆ ಪ್ರಸ್ತಾವನೆಗಳು ಬಂದ ನಂತರ ಪರಿಶೀಲಿಸಲಾಗುವುದು.